## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಖಜಾನೆಗಳಲ್ಲಿ ವರ್ಷಾಂತ್ಯದ ಬಿಲ್ಲುಗಳನ್ನು ಮಾರ್ಚ್ 31ರಂದೇ ತೀರ್ಣಗೊಳಿಸಿ ಲೆಕ್ಕವನ್ನು ಮುಕ್ತಾಯಗೊಳಿಸುವ ಬಗ್ಗೆ.

**ಓದಲಾಗಿದೆ :** 1. ಸರ್ಕಾರಿ ಆದೇಶ ಸಂಖ್ಯೆ :ಆಇ 16 ಬಿಪಿಇ 2017, ದಿನಾಂಕ:11-01-2018.

2. ನಿರ್ದೇಶಕರು, ಖಜಾನೆ ಇಲಾಖೆ ಇವರ ಪತ್ರ ಸಂಖ್ಯೆ: ಖ.ನಿ.ಪ್ರಕ್ರಿಯೆ/73/2017-18, ದಿನಾಂಕ: 02-01-2019.

* * * * *

**ಪ್ರಸ್ತಾವನೆ :**

2017-18ನೇ ಸಾಲಿನ ವರ್ಷಾಂತ್ಯದ ಬಿಲ್ಲುಗಳನ್ನು ಖಜಾನೆಗಳಲ್ಲಿ ಸ್ವೀಕರಿಸಿ ತೀರ್ಣಗೊಳಿಸಿ ದಿನಾಂಕ:31-3-2018ರಂದೇ 2017-18ನೇ ಸಾಲಿನ ಲೆಕ್ಕಗಳನ್ನು ಮುಕ್ತಾಯಗೊಳಿಸಲು ಉಲ್ಲೇಖ (1)ರ ಸರ್ಕಾರಿ ಆದೇಶದಲ್ಲಿ ಕಾಲಮಿತಿ ಸೂಚಿಸಿ ವೇಳಾಪಟ್ಟಿಯನ್ನು ನಿಗಧಿಪಡಿಸಲಾಗಿತ್ತು. ಸದರಿ ವೇಳಾಪಟ್ಟಿಯಂತೆ ಇಲಾಖಾ ಅಧಿಕಾರಿಗಳು ಹಾಗೂ ಖಜಾನಾಧಿಕಾರಿಗಳು ಸೂಕ್ತ ಕ್ರಮ ಕೈಗೊಂಡಿದ್ದು ಯೋಜನೆಯನ್ನು ಯಶಸ್ವಿಯಾಗಿ ನಿರ್ವಹಿಸಲಾಗಿದೆ.

2018-19ನೇ ಸಾಲಿನ ವರ್ಷಾಂತ್ಯದ ಬಿಲ್ಲುಗಳನ್ನು ಸಹ ಖಜಾನೆಗಳಲ್ಲಿ ಸ್ವೀಕರಿಸಿ ತೀರ್ಣಗೊಳಿಸಿ ದಿನಾಂಕ:31-3-2019ರಂದೇ 2018-19ನೇ ಸಾಲಿನ ಲೆಕ್ಕಗಳನ್ನು ಮುಕ್ತಾಯಗೊಳಿಸಲು ಸೂಕ್ತ ವೇಳಾಪಟ್ಟಿಯನ್ನು ನೀಡಿ ಸಾಕಷ್ಟು ಮುಂಚಿತವಾಗಿ ಆದೇಶವನ್ನು ಹೊರಡಿಸುವುದು ಅವಶ್ಯವಿದೆಯೆಂದು ಖಜಾನೆ ನಿರ್ದೇಶಕರು ಮೇಲೆ (2)ರಲ್ಲಿ ಓದಲಾದ ಪತ್ರದಲ್ಲಿ ಸರ್ಕಾರವನ್ನು ಕೋರಿದ್ದಾರೆ. ಆದ್ದರಿಂದ ಈ ಆದೇಶ.

**ಸರ್ಕಾರಿ ಆದೇಶ ಸಂಖ್ಯೆ : ಆಇ 01 ಬಿಪಿಇ 2019, ಬೆಂಗಳೂರು, ದಿನಾಂಕ:14-01-2019**

**ಎ) ಆಡಳಿತ ಇಲಾಖೆಗಳ ಬಿಲ್ಲುಗಳನ್ನು ಖಜಾನೆಗೆ ಸಲ್ಲಿಸಲು ನಿಗದಿಗೊಳಿಸಿರುವ ಕಾಲಮಿತಿ.**

| ಕ್ರ ಸಂ: | ಬಿಲ್ಲುಗಳ ಸ್ವರೂಪ/ವಿವರಗಳು | 31-01-2019ರೊಳಗೆ ಬಿಡುಗಡೆ ಆದೇಶಗಳನ್ನು ಹೊರಡಿಸಿ upload ಆಗಿರುವ ವೆಚ್ಚಗಳಿಗೆ ಸಂಬಂಧಿಸಿದಂತೆ ಬಿಲ್ಲು ಸಲ್ಲಿಸುವ ಕಡೆಯ ದಿನಾಂಕ | 31-01-2019ರ ನಂತರ ಬಿಡುಗಡೆ ಮಾಡುವ ಹಾಗೂ ಆಗುವ ವೆಚ್ಚಗಳಿಗೆ ಸಂಬಂಧಿಸಿದಂತೆ | |
|---|---|---|---|---|
| | | | ಹಣ ಬಿಡುಗಡೆ/ upload ಮಾಡಲು ಕಡೆಯ ದಿನಾಂಕ | ಬಿಲ್ಲು ಸಲ್ಲಿಸುವ ಕಡೆಯ ದಿನಾಂಕ |
| 1 | 2 | 3 | 4 | 5 |
| 1 | ವೇತನ / ವೇತನ ಬಾಕಿ ಬಿಲ್ಲುಗಳು/ ಹಬ್ಬದ ಮುಂಗಡ ಬಿಲ್ಲು/ ಅನುದಾನಿತ ವೇತನ ಬಿಲ್ಲುಗಳು. | 16-02-2019 | 05-03-2019 | 08-03-2019 |
| 2 | ಕಛೇರಿ ವೆಚ್ಚಗಳಿಗೆ ಸಂಬಂಧಿಸಿದಂತೆ ಸಾದಿಲ್ವಾರು ಬಿಲ್ಲುಗಳು/ಪ್ರಯಾಣ ಭತ್ಯೆ ಬಿಲ್ಲುಗಳು. | 16-02-2019 | 05-03-2019 | 12-03-2019 |

| ಕ್ರ ಸಂ: | ಬಿಲ್ಲುಗಳ ಸ್ವರೂಪ/ವಿವರಗಳು | 31-01-2019ರೊಳಗೆ ಬಿಡುಗಡೆ ಆದೇಶಗಳನ್ನು ಹೊರಡಿಸಿ upload ಆಗಿರುವ ವೆಚ್ಚಗಳಿಗೆ ಸಂಬಂಧಿಸಿದಂತೆ ಬಿಲ್ಲು ಸಲ್ಲಿಸುವ ಕಡೆಯ ದಿನಾಂಕ | 31-01-2019ರ ನಂತರ ಬಿಡುಗಡೆ ಮಾಡುವ ಹಾಗೂ ಆಗುವ ವೆಚ್ಚಗಳಿಗೆ ಸಂಬಂಧಿಸಿದಂತೆ | |
|---|---|---|---|---|
| | | | ಹಣ ಬಿಡುಗಡೆ/ upload ಮಾಡಲು ಕಡೆಯ ದಿನಾಂಕ | ಬಿಲ್ಲು ಸಲ್ಲಿಸುವ ಕಡೆಯ ದಿನಾಂಕ |
| 1 | 2 | 3 | 4 | 5 |
| 3 | EAP, ಕೇಂದ್ರ ಪುರಸ್ಕೃತ ಹಾಗೂ ಕೇಂದ್ರ ಯೋಜನೆ ಹೊರತುಪಡಿಸಿ ಇತರೆ ಯೋಜನೆಗಳಿಗೆ ಸಂಬಂಧಿಸಿದಂತೆ ಸಾದಿಲ್ವಾರು ಬಿಲ್ಲುಗಳು ಹಾಗೂ ವೇತನೇತರ ಸಹಾಯಾನುದಾನ ಬಿಲ್ಲುಗಳು. | 20-02-2019 | 15-03-2019 | 20-03-2019 |
| 4 | ಸಂಕ್ಷಿಪ್ತ ಸಾದಿಲ್ವಾರು ಬಿಲ್ಲುಗಳು ಹಾಗೂ EAP, ಕೇಂದ್ರ ಪುರಸ್ಕೃತ ಹಾಗೂ ಕೇಂದ್ರ ಯೋಜನೆ ಬಿಲ್ಲುಗಳು. | 12-03-2019 | -- | 15-03-2019 |
| 5 | ಏಪ್ರಿಲ್ ತಿಂಗಳಲ್ಲಿ ಪಾವತಿಯಾಗುವ ಮಾರ್ಚ್ ತಿಂಗಳ ವೇತನ/ವೇತನ ಅನುದಾನಿತ ಬಿಲ್ಲುಗಳು. | --- | 02-04-2019 ರ ನಂತರ | |
| 6 | ಇಲಾಖೆಗಳು ಹಾಗೂ ಸಚಿವಾಲಯದ ಆಡಳಿತ ಇಲಾಖೆಗಳು ಹೊರಡಿಸುವ ಪುನರ್ವಿನಿಯೋಗದ ಬಿಲ್ಲುಗಳು. | --- | 12-03-2019 | |
| 7 | ವಿದ್ಯುಚ್ಛಕ್ತಿ, ದೂರವಾಣಿ ಹಾಗೂ ಕಟ್ಟಡ ಬಾಡಿಗೆಗೆ ಸಂಬಂಧಿಸಿದ ಬಿಲ್ಲುಗಳು. | --- | 16-03-2019 | |
| 8 | ಪೂರಕ ಅಂದಾಜು-2 ರಲ್ಲಿ ಸಕ್ರಮಗೊಳಿಸುವ ಹೆಚ್ಚುವರಿ ಆದೇಶದ ಬಿಲ್ಲುಗಳು. | --- | 12-03-2019 | 15-03-2019 |

| ಕ್ರ ಸಂ: | ಬಿಲ್ಲುಗಳ ಸ್ವರೂಪ/ವಿವರಗಳು | 31-01-2019ರೊಳಗೆ ಬಿಡುಗಡೆ ಆದೇಶಗಳನ್ನು ಹೊರಡಿಸಿ upload ಆಗಿರುವ ವೆಚ್ಚಗಳಿಗೆ ಸಂಬಂಧಿಸಿದಂತೆ ಬಿಲ್ಲು ಸಲ್ಲಿಸುವ ಕಡೆಯ ದಿನಾಂಕ | 31-01-2019ರ ನಂತರ ಬಿಡುಗಡೆ ಮಾಡುವ ಹಾಗೂ ಆಗುವ ವೆಚ್ಚಗಳಿಗೆ ಸಂಬಂಧಿಸಿದಂತೆ | |
|---|---|---|---|---|
| | | | ಹಣ ಬಿಡುಗಡೆ/ upload ಮಾಡಲು ಕಡೆಯ ದಿನಾಂಕ | ಬಿಲ್ಲು ಸಲ್ಲಿಸುವ ಕಡೆಯ ದಿನಾಂಕ |
| 1 | 2 | 3 | 4 | 5 |
| 9 | ಪೂರಕ ಅಂದಾಜು-2 ರಲ್ಲಿ ಒದಗಿಸಿರುವ ಅನುದಾನದ ಬಿಲ್ಲುಗಳು | --- | 15-03-2019 | 23-03-2019 |
| 10 | ZP/TP ಗೆ ಸಂಬಂಧಿಸಿದ ಎಲ್ಲಾ upload ಗಳು | --- | 12-03-2019 | |

ಬಿ) ಆಡಳಿತ ಇಲಾಖೆಗಳಿಗೆ ಸೂಚನೆಗಳು:-

1. ದಿನಾಂಕ:**31-03-2019 ಭಾನುವಾರವಾಗಿರುವುದರಿಂದ,** ದಿನಾಂಕ:**30-03-2019**ರ ಅಪರಾಹ್ನ **2.30** ಘಂಟೆಯ ನಂತರ ಯಾವುದೇ ಬಿಲ್ಲುಗಳನ್ನು ಖಜಾನೆಗಳಿಗೆ ಸಲ್ಲಿಸುವುದನ್ನು ನಿರ್ಬಂಧಿಸಲಾಗಿದೆ.

2. ಇಲಾಖಾ ಮುಖ್ಯಸ್ಥರು ಮತ್ತು ಅವರುಗಳ ಹಣ ಪಡೆಯುವ ಮತ್ತು ಬಟವಾಡೆ ಮಾಡುವ ಅಧಿಕಾರಿಗಳು ಈ ಆದೇಶದಲ್ಲಿ ತಿಳಿಸಿರುವ ವೇಳಾ ಪಟ್ಟಿಯಂತೆ ಕ್ರಮ ಕೈಗೊಳ್ಳತಕ್ಕದ್ದು ಮತ್ತು ಆರ್ಥಿಕ ಮಿತವ್ಯಯ ಆದೇಶಗಳನ್ನು ಕಡ್ಡಾಯವಾಗಿ ಪಾಲಿಸತಕ್ಕದ್ದು.

3. ಸರ್ಕಾರದ ಆದೇಶ ಸಂಖ್ಯೆ: **ಆಇ 2 ಟಿಎಫ್‌ಸಿ 2004,** ದಿನಾಂಕ: **09-09-2004**ರಲ್ಲಿ ತಿಳಿಸಿರುವ ಸೂಚನೆಗಳನ್ನು ಸಹ ಗಮನದಲ್ಲಿಟ್ಟುಕೊಂಡು ಮೇಲೆ ಹೇಳಿರುವ ಅಂಶಗಳನ್ನು ಗಣನೆಗೆ ತೆಗೆದುಕೊಂಡು ಆಯವ್ಯಯದಲ್ಲಿ ನಿಗದಿಪಡಿಸಿರುವ ಮೊತ್ತವನ್ನು ದಿನಾಂಕ **30-03-2019**ರೊಳಗೆ ವೆಚ್ಚ ಮಾಡತಕ್ಕದ್ದು.

4. ಕ್ರಮ ಸಂಖ್ಯೆ-4ಕ್ಕೆ ಸಂಬಂಧಿಸಿದಂತೆ ಕಾಲೇಜು ಶಿಕ್ಷಣ, ತಾಂತ್ರಿಕ ಶಿಕ್ಷಣ, ಪದವಿ ಪೂರ್ವ ಶಿಕ್ಷಣ, ಅಂಗವಿಕಲರ ಕಲ್ಯಾಣ ಇಲಾಖೆಗೆ ಸಂಬಂಧಿಸಿದ ವಿದ್ಯಾರ್ಥಿವೇತನದ ಫಲಾನುಭವಿಗಳ ಪಟ್ಟಿಯನ್ನು ಸಾಕಷ್ಟು ಮುಂಚಿತವಾಗಿ ಡಿಡಿಓ ಗಳು ತಯಾರಿಸತಕ್ಕದ್ದು.

5. ಖಜಾನೆ-2 ರಲ್ಲಿ ಬಿಲ್ಲುಗಳನ್ನು ಸಲ್ಲಿಸುವ ಹಣ ಸೆಳೆಯುವ ಬಟವಾಡೆ ಅಧಿಕಾರಿಗಳು ಮೇಲೆ ಉಲ್ಲೇಖಿಸಿದ ದಿನಾಂಕದೊಳಗೆ ಆನ್‌ಲೈನ್‌ನಲ್ಲಿ ಮತ್ತು ಭೌತಿಕವಾಗಿ ಬಿಲ್ಲುಗಳನ್ನು ಸಲ್ಲಿಸತಕ್ಕದ್ದು.

6. ಖಜಾನೆ-2 ಪಿ.ಆರ್.ಐ. ಮಾಡ್ಯೂಲ್ ಅನುಷ್ಠಾನಗೊಂಡಿರುವ ಜಿಲ್ಲಾ ಪಂಚಾಯತ್/ತಾಲ್ಲೂಕು ಪಂಚಾಯತ್ ಗಳ ಸಂಬಂಧ ವೆಚ್ಚವಾಗದೆ ಇರುವ 2018-19ರ ಅನುದಾನವನ್ನು ಸರ್ಕಾರದ ಲೆಕ್ಕ ಶೀರ್ಷಿಕೆಗೆ ಜಮೆ ಮಾಡಲು ಅನುಕೂಲವಾಗುವಂತೆ **ದಿನಾಂಕ:30-03-2019**ರಂದು ಬಿಲ್ಲನ್ನು ಸಲ್ಲಿಸುವಂತೆ ಅವಕಾಶ ಕಲ್ಪಿಸಲಾಗಿದೆ.

ಸಿ) **ಖಜಾನೆಗಳಿಗೆ ಸೂಚನೆಗಳು:-**

1. ಎಲ್ಲಾ ಖಜಾನೆಗಳಲ್ಲಿ ಲೆಕ್ಕಗಳನ್ನು ಅಂತಿಮಗೊಳಿಸಲು ಅನುಕೂಲವಾಗುವಂತೆ ದಿನಾಂಕ:**01-04-2019**ನ್ನು ವ್ಯವಹಾರ ರಹಿತ ದಿನವನ್ನಾಗಿ ಘೋಷಿಸಲಾಗಿದೆ.

2. ಖಜಾನೆಗಳು ಮಾರ್ಚ್ **2019**ರ ಲೆಕ್ಕಗಳನ್ನು **31ನೇ ಮಾರ್ಚ್ 2019**ರ ನಂತರವೂ ತೆರೆದಿರಕೂಡದೆಂದು ಸೂಚಿಸಲಾಗಿದೆ.

3. ಮಹಾಲೇಖಪಾಲರು (ಎ ಮತ್ತು ಇ) ರವರು 2018-19ರ ತಾತ್ಕಾಲಿಕ ಲೆಕ್ಕಗಳನ್ನು 10ನೇ ಮೇ 2019ರೊಳಗಾಗಿ ಸರ್ಕಾರಕ್ಕೆ ಕಳುಹಿಸಲು ಅನುವಾಗುವಂತೆ ಖಜಾನಾಧಿಕಾರಿಗಳು ನಿಗದಿತ ಸಮಯದೊಳಗೆ ಮಹಾಲೇಖಪಾಲರಿಗೆ ಮಾರ್ಚ್ 2019ರ ಲೆಕ್ಕಗಳನ್ನು ಸಲ್ಲಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಪವನ್ ಕುಮಾರ್ ಮಾಲಪಾಟಿ)
ಸರ್ಕಾರದ ಉಪ ಕಾರ್ಯದರ್ಶಿ
(ಆಯವ್ಯಯ & ಸಂಪನ್ಮೂಲ)
ಆರ್ಥಿಕ ಇಲಾಖೆ

**ಇವರಿಗೆ :-**

1) ಪ್ರಧಾನ ಮಹಾಲೇಖಪಾಲರು (A&E)/ (G&SSA)/ (E&RSA), ಕರ್ನಾಟಕ, ಬೆಂಗಳೂರು.
2) ರಿಜಿಸ್ಟ್ರಾರ್ ಜನರಲ್, ಕರ್ನಾಟಕ ಉಚ್ಚ ನ್ಯಾಯಾಲಯ, ಬೆಂಗಳೂರು.
3) ಮುಖ್ಯ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿ, ಕರ್ನಾಟಕ, ಬೆಂಗಳೂರು.
4) ಅಪರ ಮುಖ್ಯ ಕಾರ್ಯದರ್ಶಿ, ಕರ್ನಾಟಕ, ಬೆಂಗಳೂರು.
5) ಸರ್ಕಾರದ ಎಲ್ಲಾ ಅಪರ/ಪ್ರಧಾನ ಕಾರ್ಯದರ್ಶಿಗಳು / ಕಾರ್ಯದರ್ಶಿಗಳು.
6) ಅಭಿವೃದ್ಧಿ ಆಯುಕ್ತರು, ವಿಧಾನಸೌಧ, ಬೆಂಗಳೂರು.
7) ಲೋಕಾಯುಕ್ತರು, ಕರ್ನಾಟಕ, ಬೆಂಗಳೂರು.
8) ಎಲ್ಲಾ ಪ್ರಾದೇಶಿಕ ಆಯುಕ್ತರುಗಳು.
9) ರಿಜಿಸ್ಟ್ರಾರ್, ಕರ್ನಾಟಕ ಆಡಳಿತ ಮಂಡಳಿ, ಕಂದಾಯ ಭವನ, ಕೆ.ಜಿ.ರಸ್ತೆ, ಬೆಂಗಳೂರು-9.
10) ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಗಳು /ಎಲ್ಲಾ ಜಿಲ್ಲಾ ಪಂಚಾಯತ್‌ಗಳ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು.
11) ನಿರ್ದೇಶಕರು, ಖಜಾನೆ ಇಲಾಖೆ, ಬೆಂಗಳೂರು.
12) ಎಲ್ಲಾ ಆಂತರಿಕ ಆರ್ಥಿಕ ಸಲಹೆಗಾರರು.
13) ಎಲ್ಲಾ ಇಲಾಖಾ ಮುಖ್ಯಸ್ಥರು.
14) ಕಛೇರಿ ಪ್ರತಿ/ಹೆಚ್ಚುವರಿ ಪ್ರತಿಗಳು.